ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯ ರೋಗ ನಿಯಂತ್ರಣ ಕುರಿತು.

530(5118) ಶ್ರೀ ಯೋಗೀಶ್ ಭಟ್ ಎಸ್. (ಮಂಗಳೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯ ರೋಗ ನಿಯಂತ್ರಣಕ್ಕೆ ಏಡ್ಸ್ ರೋಗ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳೇನು?

ಆ) ಮಂಗಳೂರಲ್ಲಿ ನಗರ ಮಲೇರಿಯ ನಿಯಂತ್ರಣ ಘಟಕ ಆರಂಭ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಇ) ಮಂಗಳೂರಲ್ಲಿ ನೊಣದ ಕಾಟ ವಿಪರೀತವಾಗಿದ್ದು ಸಾಂಕ್ರಾಮಿಕ ರೋಗ ಬರುವ ಸೂಚನೆಗಳಿದ್ದು ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯ ರೋಗ ನಿಯಂತ್ರಣಕ್ಕೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

1) ಆರೋಗ್ಯ ಕಾರ್ಯಕರ್ತರಿಂದ ಪ್ರತಿ ಹದಿನೈದು ದಿನಕ್ಕೊಮ್ಮೆ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಮನೆಗೆ ಭೇಟಿ ನೀಡಿ ಜ್ವರ ಸಮೀಕ್ಷೆ ನಡೆಸಿ, ರಕ್ತ ಲೇಪನ ಸಂಗ್ರಹಿಸಲಾಗುತ್ತಿದೆ.

2) ಮಲೇರಿಯ ಎಂದು ಖಚಿತಪಟ್ಟ ಎಲ್ಲಾ ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ.

3) ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪ್ರಯೋಗಾಲಯದ ಸೌಲಭ್ಯ ಒದಗಿಸಲಾಗಿದೆ.

3) ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪ್ರಯೋಗಾಲಯದ ಸೌಲಭ್ಯ ಒದಗಿಸಲಾಗಿದೆ.

4) 2000ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಯೋಗಾಲಯದ ಕೆಲಸ ಕಾರ್ಯಗಳನ್ನು ಬಲಪಡಿಸಲು ಸುಮಾರು 47 ಕಿರಿಯ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿ ಸಮಸ್ಯಾತ್ಮಕ ಪ್ರದೇಶಗಳಿಗೆ ನಿಯೋಜಿಸಲಾಗಿದೆ.

5) ನಗರ ಪ್ರದೇಶದಲ್ಲಿ ಮಲೇರಿಯ ನಿಯಂತ್ರಣ ಮತ್ತು ಸೊಳ್ಳೆ ನಿಯಂತ್ರಣ ಕಾರ್ಯವನ್ನು ನಗರ ಸಭೆಯ ಮುಖಾಂತರ ಕೈಗೊಳ್ಳಲಾಗುತ್ತಿದೆ.

6) ಮಲೇರಿಯ ಕ್ರಿಯಾ ಸಮಿತಿಯೊಂದನ್ನು ಮಂಗಳೂರು ನಗರದಲ್ಲಿ ರಚಿಸಲಾಗಿದ್ದು ಜಿಲ್ಲಾ ಮಲೇರಿಯ ಅಧಿಕಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಸಕ್ರಿಯವಾಗಿ ಮಲೇರಿಯ ನಿಯಂತ್ರಣ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿವೆ.

7) ಜನ ಸಮುದಾಯಕ್ಕೆ ಮಲೇರಿಯ ರೋಗ ತಡೆಗಟ್ಟುವ ವಿಧಿವಿಧಾನಗಳನ್ನು ಹಾಗೂ ಇದರಲ್ಲಿ ಜನ ಸಾಮಾನ್ಯರ ಪಾತ್ರದ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಡ್ಸ್ ರೋಗವನ್ನು ನಿಯಂತ್ರಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಸೊಸೈಟಿ ವತಿಯಿಂದ ಏಡ್ಸ್ ಕಾರ್ಯಕ್ರಮದಡಿಯಲ್ಲಿ ಮಂಗಳೂರು ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ರಕ್ತ ನಿಧಿ ಕೇಂದ್ರವನ್ನು ಆಧುನಿಕರಿಸಲಾಗಿ ಜನ ಸಾಮಾನ್ಯರಿಗೆ ಸುರಕ್ಷಿತ ರಕ್ತ ಒದಗಿಸಲು ಕ್ರಮ ಕೈಗೊಳ್ಳಲಾಗಿ ಸುರಕ್ಷಿತ ರಕ್ತ ಒದಗಿಸಲು ಸ್ವಯಂ ಪ್ರೇರಿತ ರಕ್ತದಾನಕ್ಕೆ ಮುಂದಾಗಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಜಿಲ್ಲಾ ಆಸ್ಪತ್ರೆಯ ಲೈಂಗಿಕ ರೋಗ ಚಿಕಿತ್ಸಾಲಯವನ್ನು ಬಲವರ್ಧನೆಗೊಳಿಸಿ ಔಷಧ ಸಾಮಗ್ರಿಗಳನ್ನು ಕೂಡಾ ಚಿಕಿತ್ಸೆ ಸಲುವಾಗಿ ಒದಗಿಸಲಾಗಿದೆ.

2) ಪ್ರತಿ ವರ್ಷವೂ ಜನ ಸಾಮಾನ್ಯರಲ್ಲಿ ಹೆಚ್ಚಿನ ಅರಿವು ಮೂಡಿಸಲು ಅಕ್ಟೋಬರ್ ಒಂದರಂದು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆಯನ್ನು ಹಾಗೂ ಡಿಸೆಂಬರ್ ಒಂದರಂದು ವಿಶ್ವ ಏಡ್ಸ್ ದಿನವನ್ನು ಜಿಲ್ಲೆಯಾದ್ಯಂತ ಆಚರಿಸಲಾಗುತ್ತಿದೆ.

3) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಏಡ್ಸ್ ನಿಯಂತ್ರಣದ ಬಗ್ಗೆ ಜನಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದ್ದು, ಭಾರತ ಸರ್ಕಾರದ ಕ್ಷೇತ್ರ ಪ್ರಚಾರ ನಿರ್ದೇಶಕರು, ವಾರ್ತಾ ಇಲಾಖೆ, ಪತ್ರಿಕಾ ಪ್ರಕಟಣೆ, ಆಕಾಶವಾಣಿ, ದೂರದರ್ಶನದ ಮೂಲಕ ಪ್ರಚಾರ ನೀಡಲಾಗಿತ್ತಿದೆ. ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳು, ಯುವಕ ಮಂಡಲಿ, ಮಹಿಳಾ ಮಂಡಲಿಗಳು ತಮ್ಮ ಕಾರ್ಯಕ್ರಮಗಳಲ್ಲಿ ಏಡ್ಸ್ ನಿಯಂತ್ರಣಕ್ಕೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಚಾರ್ಟ್, ಭಿತ್ತಿಪತ್ರ, ಕರಪತ್ರಗಳನ್ನು ಒದಗಿಸಿಕೊಟ್ಟಿದ್ದು ಅದನ್ನು ಸಂಘ ಸಂಸ್ಥೆಗಳಿಗೂ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಹಂಚಿ ಅರಿವು ಮೂಡಿಸಲು ಬಳಸಲಾಗುತ್ತಿದೆ.

4) ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಸಮರ್ಪಕವಾಗಿ ಸಂಸ್ಕರಣೆ ಮಾಡಿದ ಸೂಜಿ, ಸಿರಿಂಜುಗಳನ್ನು ಮತ್ತು ಉಪಕರಣಗಳನ್ನು ಬಳಸಲು ಸೂಚಿಸಲಾಗಿದೆ.

5) ಮತ್ತೊಂದು ಮಹತ್ವದ ಕಾರ್ಯಕ್ರಮವೆಂದರೆ ಕುಟುಂಬ ಆರೋಗ್ಯ ಅರಿವು ಆದೋಲನವನ್ನು ಪ್ರತಿವರ್ಷವೂ ಆಚರಿಸಲಾಗುತ್ತಿದೆ. ಈ ಆಂದೋಲನದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್.ಐ.ವಿ ಏಡ್ಸ್, ಎಸ್‌ಟಿಡಿ ನಿಯಂತ್ರಣದ ಬಗ್ಗೆ ಅರಿವು ಮೂಡಿಸಲಾಗಿವುದು. ಅಲ್ಲದೆ ಲೈಂಗಿಕ ರೋಗಗಳಿಗೆ ಮತ್ತು ಪ್ರಜನಾಂಗ ಸೋಂಕು ರೋಗಗಳಿಗೆ ಚಿಕಿತ್ಸೆ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

6) ಜನಸಾಮಾನ್ಯರಲ್ಲಿ, ಅದರಲ್ಲೂ, ಹೆಚ್ಚಾಗಿ ಏಡ್ಸ್ ಸೊಂಕಿನ ತೊಂದರೆಗೆ ಒಳಗಾಗುವ ಗುಂಪುಗಳನ್ನು ಗುರ್ತಿಸಿ ಅಂತಹ ಸಮುದಾಯದಲ್ಲಿ ಹೆಚ್‌ಐವಿ ಏಡ್ಸ್ ನಿಯಂತ್ರಣದ ಬಗ್ಗೆ ಮಾಹಿತಿಗಳನ್ನು ಸ್ವಯಂ ಸೇವಾ ಸಂಘಗಳ ಮುಖಾಂತರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

7) ಜಿಲ್ಲೆಯ 202 ಗ್ರಾಮ ಮಟ್ಟದ ಹಂತದಲ್ಲಿ ಹದಿಹರೆಯ ಜಿಲ್ಲಾ ಸಾಕ್ಷರತಾ ಸಮಿತಿಯವರು ಹೆಚ್‌ಐವಿ ಏಡ್ಸ್ ಲೈಂಗಿಕ ರೋಗದ ಬಗ್ಗೆ ಜನ ಜಾಗೃತಿ ಜರುಗಿಸುತ್ತಾರೆ.

ಆ) ಭಾರತ ಸರ್ಕಾರದ ಮಾರ್ಗಸೂಚಿಯಂತೆ ಫೈಲೇರಿಯ ಮತ್ತು ನಗರ ಮಲೇರಿಯ ನಿಯಂತ್ರಣಕ್ಕೆ ಏಕರೂಪದ ಕಾರ್ಯಕ್ರಮವಿರುವುದರಿಂದ ಹಾಗೂ ಈಗಾಗಲೇ ಫೈಲೇರಿಯ ಘಟಕವು ಮಂಗಳೂರಿನಲ್ಲಿ ಮಲೇರಿಯ ನಿಯಂತ್ರಣ ಕಾರ್ಯಕ್ರಮಗಳನ್ನು ಸಹ ನಿರ್ವಹಿಸುತ್ತಿರುವುದರಿಂದ ಮಂಗಳೂರಿಗೆ ಪ್ರತ್ಯೇಕ ನಗರ ಮಲೇರಿಯ ಘಟಕವನ್ನು ಸ್ಥಾಪಿಸುವ ಅವಶ್ಯಕತೆ ಇರುವುದಿಲ್ಲ.

ಇ) ಮಂಗಳೂರು ಮಹಾ ನಗರ ಪಾಲಿಕೆ ವತಿಯಿಂದ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನೊಣಗಳ ಹಾವಳಿಯನ್ನು ನಿಯಂತ್ರಿಸಲು ಕ್ರಿಮಿನಾಶಕಗಳನ್ನು ಸಿಂಪರಣೆ ಮಾಡಲಾಗಿತ್ತಿದೆ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಲೇರಿಯಾ ರೋಗದಿಂದ ಆದಂಥ ಸಾವುನೋವಿನ ಹಿನ್ನಲೆಯಲ್ಲಿ, ಈ ಪ್ರಶ್ನೆಯನ್ನು ಕೇಳಿದ್ದೇನೆ. ಇವತ್ತಿಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಮನೆಮನೆಗಳಲ್ಲಿ ಈ ರೋಗ ಇನ್ನೂ ಇದೆ. ಸರ್ಕಾರದ ದಾಖಲೆಯಲ್ಲಿ ಏನಿದೆ ಎನ್ನುವುದು ನನಗೆ ಗೊತ್ತಿಲ್ಲ. ಆರೋಗ್ಯ ಸಚಿವರ ಜೊತೆ ಚರ್ಚೆ ಮಾಡುವ ಸಂದರ್ಭದಲ್ಲಿ ಈ ರೋಗ ನಿಯಂತ್ರಣದಲ್ಲಿದೆಯೆಂದು ಹೇಳುತ್ತಾರೆ. ಎಲ್ಲಿ ನಿಯಂತ್ರಣವಾಗಿದೆ ಎನ್ನುವುದು

ನನಗಂತೂ ಗೊತ್ತಾಗುತ್ತಿಲ್ಲ. ಕನಿಷ್ಟ ಲ್ಯಾಬೊರೇಟರಿ ಟೆಕ್ನಿಶಿಯನ್ಸ್‌ನ್ನು ಕೊಡಿಸುವಂಥದ್ದು ಮತ್ತು ಔಷಧಿ ಸಿಂಪಡಿಸುವುದಕ್ಕೆ 'ಡಿ' ವರ್ಗದ ನೌಕರರ ನೇಮಕಾತಿಗೆ ಮಹಾನಗರ ಪಾಲಿಕೆಗೆ ಸರ್ಕಾರದ ಮತಿಯಿಂದ ಅನುಮತಿ ಕೊಡಿಸುವ ಕೆಲಸವನ್ನು ತಕ್ಷಣ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):— ಮಾನ್ಯ ಅಧ್ಯಕ್ಷರೆ, ಈ ಮಲೇರಿಯಾ ರೋಗವನ್ನು ಕಂಡುಹಿಡಿಯತಕ್ಕಂಥ ಪ್ರಕ್ರಿಯೆಗಳಲ್ಲಿ ಈಗ ಖಾಸಗಿ ವೈದ್ಯರು ನಮ್ಮ ನಿರೀಕ್ಷಣೆ ಮಟ್ಟದಲ್ಲಿ ಸಹಕಾರ ಕೊಡುತ್ತಿಲ್ಲ. ಆದರೂ ಆರೋಗ್ಯ ಇಲಾಖೆಯಿಂದ ಅಲ್ಲಿ ಬೇಕಾದಂಥ ಕಾರ್ಯಕಾರಿಗಳನ್ನು ಮಾಡಿ, ಸ್ವಯಂಸೇವಾ ಸಂಘಗಳನ್ನು, ಖಾಸಗಿ ವೈದ್ಯರನ್ನು ಮತ್ತು ಸರ್ಕಾರಿ ವೈದ್ಯರು ಹೀಗೆ ಎಲ್ಲರ ಜೊತೆ ವಿಚಾರ ವಿನಿಮಯ ಮಾಡಿ ಇದರ ಬಗ್ಗೆ ಎಲ್ಲರೂ ಸಹಕಾರ ನೀಡಬೇಕು ಎನ್ನತಕ್ಕಂಥ ಪ್ರಯತ್ನ ನಡೆದಿದೆ. ಅದಕ್ಕೂ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಸ್ಪೇ ಮಾಡತಕ್ಕಂಥ ಕೆಲಸ ನಡೆಯಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕಾರ್ಪೊರೇಷನ್‌ನವರೇ ನೇಮಕ ಮಾಡಿಕೊಳ್ಳಬೇಕು. ಅವರು ಸರ್ಕಾರಕ್ಕೆ ಅನುಮತಿ ಕೇಳಿದರೆ ಸರ್ಕಾರ ಖಂಡಿತವಾಗಿ ಕೊಡುತ್ತದೆ. ಔಷಧಿಯನ್ನು ಸಿಂಪಡಿಸುವುದಕ್ಕೆ ನೇಮಕ ಮಾಡಿಕೊಂಡರೆ ಅಗತ್ಯವಾದಂಥ ಔಷಧಿ ವಗೈರೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಿದ್ದೇವೆ, ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್:— ಮಾನ್ಯ ಅಧ್ಯಕ್ಷರೆ, ಎಲ್ಲಾ ಖಾಸಗಿ ವೈದ್ಯರಿಂದ ನಮಗೆ ಸಹಕಾರ ಸಿಕ್ಕೇ ಸಿಗುತ್ತದೆ. ಆದರೆ ಸರ್ಕಾರದ ಕಡೆಯಿಂದ ಸಹಕಾರ ಸಿಗುತ್ತಿಲ್ಲ ಎನ್ನುವುದನ್ನು ಹೇಳುತ್ತೇದ್ದೇನೆ; ಮತ್ತು ನೌಕರರ ನೇಮಕಾತಿಗೆ ಕಾರ್ಪೊರೇಷನ್ ಕಡೆಯಿಂದ ಸರ್ಕಾರಕ್ಕೆ ಅನುಮತಿ ಕೇಳಿ ಈಗಾಗಲೇ ಒಂದು ವರ್ಷಕ್ಕಿಂತಲೂ ಜಾಸ್ತಿ ಸಮಯ ಆಗಿದೆ. ಇನ್ನೂ ಸರ್ಕಾರದ ಕಡೆಯಿಂದ ಅನುಮತಿ ಕೊಟ್ಟಿಲ್ಲ. ತಕ್ಷಣ ಆ ಅನುಮತಿಯನ್ನು ಕೊಡಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:— ಮಾನ್ಯ ಅಧ್ಯಕ್ಷರೆ, ಸರ್ಕಾರ ಎಂದರೆ ನಮ್ಮ ಹೆಚ್.ಯು.ಡಿ. ಡಿಪಾರ್ಟ್‌ಮೆಂಟ್‌ನವರು ಅನುಮತಿ ಕೊಡಬೇಕಾಗುತ್ತದೆ. ಅವರ ಮುಖಾಂತರ ಅನುಮತಿ ಕೊಡುವ ನಿಟ್ಟಿನಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್:— ಮಾನ್ಯ ಅಧ್ಯಕ್ಷರೆ, ಮೊದಲ ಪ್ರಶ್ನೆಗೆ ಪೂರಕವಾಗಿ ಏಡ್ಸ್‌ಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಿದ್ದೇನೆ. ಈಗಿನ ಡ್ರಗ್ ಪಾಲಿಸಿ ಆಧಾರದಲ್ಲಿ ಬ್ಲಡ್ ಬ್ಯಾಂಕ್ ಇಲ್ಲದ ಕಡೆಗಳಲ್ಲಿ ಅಷ್ಟು ಸುಲುಭವಾಗಿ ಎಲ್ಲಿಯೂ

ಪರ್ಮಿಷನ್ ಸಿಗುತ್ತಿಲ್ಲ. ಅನೇಕ ಕಡೆಗಳಲ್ಲಿ ಪ್ರಾಪರ್ ಬ್ಲಡ್ ಚೆಕ್ಕಿಂಗ್ ಆಗುತ್ತಿಲ್ಲ. ಈ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ನಡೆಯುವಂಥ ಸಂದರ್ಭದಲ್ಲಿ ಟೆಸ್ಟ್ ಮಾಡದೆ ರಕ್ತದಾನಿಗಳು ನೇರವಾಗಿ ರೋಗಿಗೆ ರಕ್ತ ಕೊಡುವುದರಿಂದ ಏಡ್ಸ್ ಕಾಯಿಲೆ ಹಬ್ಬುವಂಥ ಸಾಧ್ಯತೆ ಇದೆ ಎನ್ನುವ ಮಾಹಿತಿಯ ಆಧಾರದಲ್ಲಿ ರಾಜ್ಯದ ಎಲ್ಲಾ ಕಡೆಗಳಲ್ಲಿ ರಕ್ತ ನಿಧಿ ಕೇಂದ್ರಗಳನ್ನು ಪ್ರಾರಂಭಿಸಲಿಕ್ಕೆ ಈಗಿರುವಂಥ ಕಟ್ಟುನಿಟ್ಟಿನ ನಿಯಮವನ್ನು ಸ್ವಲ್ಪ ಸಡಿಲಿಸಿ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಏಡ್ಸ್ ದೃಷ್ಟಿಯಿಂದಾಗಿ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಅತ್ಯಂತ ಅಧುನಿಕವಾದಂಥ ಬ್ಲಡ್ ಬ್ಯಾಂಕನ್ನು ಸ್ಥಾಪನೆ ಮಾಡಿ ಕೆಲಸ ಮಾಡುತ್ತಿದೆ. ತಮಗೂ ಗೊತ್ತಿರುವ ಹಾಗೆ ಈ ಬ್ಲಡ್ ಬ್ಯಾಂಕನ್ನು ಸ್ಥಾಪನೆ ಮಾಡಬೇಕಾದರೆ ಕೇಂದ್ರ ಸರ್ಕಾರ ನಿರೂಪಿಸಿರತಕ್ಕಂಥ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಮಾಡಬೇಕಾಗುತ್ತದೆ. ಆದ್ದರಿಂದ ಯಾರ್ಯಾರು ಆ ಒಂದು ನಿಯಮಾವಳಿ ಪ್ರಕಾರ ಚರತ್ತನ್ನು ಪೂರೈಸುತ್ತಾರೋ ಅಂಥವರಿಗೆ ಕೊಡುವುದಕ್ಕೆ ಏನೂ ತೊಂದರೆ ಇಲ್ಲ. ಖಾಸಗಿಯವರು ಎಷ್ಟು ಪ್ರಮಾಣದಲ್ಲಿ ಮಾಡುತ್ತಾರೆಂದು ಹೇಳುವುದಕ್ಕೆ ಬರುವುದಿಲ್ಲ. ಈಗ ಇರತಕ್ಕಂಥದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬ್ಲಡ್ ಸರಬರಾಜು ಆಗುತ್ತಿದೆ.

ಶ್ರೀ ಕೆ. ಪ್ರಭಾಕರ ಬಂಗೇರ :— ಮಾನ್ಯ ಅಧ್ಯಕ್ಷರೆ, ಈ ಮಲೇರಿಯಾ ಕಾಯಿಲೆ ಗ್ರಾಮಾಂತರ ಪ್ರದೇಶವಾದ ಬೆಳ್ತಂಗಡಿಯಲ್ಲಿ ಕೂಡ ಇದೆ. ಅದನ್ನು ನಿಯಂತ್ರಣ ಮಾಡಲಿಕ್ಕೆ ಇಲ್ಲಿಯೂ ಕೂಡ ಇಲಾಖೆ ಮತಿಯಿಂದ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಏಡ್ಸ್ ಕಾಯಿಲೆಯನ್ನು ನಿಯಂತ್ರಣ ಮಾಡತಕ್ಕಂಥ ವಿಚಾರದಲ್ಲಿ ವ್ಯಾಪಕವಾದಂಥ ಕಾರ್ಯಕ್ರಮವನ್ನು ದಕ್ಷಿಣ ಕನ್ನಡದಲ್ಲಿ ಹಮ್ಮಿಕೊಂಡಿದ್ದೇವೆ. ಇನ್ನೂ ಹೆಚ್ಚು ವ್ಯವಸ್ಥೆಯನ್ನು ಮಾಡಬೇಕು ಎನ್ನತಕ್ಕಂಥ ಮಾನ್ಯ ಸದಸ್ಯರ ಅಪೇಕ್ಷೆ ಏನಿದೆ ಅದರ ಬಗ್ಗೆ ಸರ್ಕಾರ ಅಗತ್ಯವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ತಮ್ಮ ಮೂಲಕ ತಿಳಿಯಬಯಸುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ :— ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವುದು ಮಲೇರಿಯಾ ರೋಗದ ಬಗ್ಗೆ. ಮಾನ್ಯ ಸಚಿವರು ಏಡ್ಸ್ ಕಾಯಿಲೆ ನಿಯಂತ್ರಣ ಬಗ್ಗೆ ಹೇಳಿದರು. ಮಲೇರಿಯಾ ರೋಗ ಗ್ರಾಮಾಂತರ ಪ್ರದೇಶದಲ್ಲಿ, ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೂಡ ಇದೆ. ಏಡ್ಸ್ ಕಾಯಿಲೆ ನಮ್ಮ ತಾಲ್ಲೂಕಿನಲ್ಲಿ ಇಲ್ಲದಿರುವುದರಿಂದ ಅದರ ಬಗ್ಗೆ ಅಷ್ಟು ಚಿಂತೆ ಮಾಡುತ್ತಿಲ್ಲ. ಮಲೇರಿಯಾ ರೋಗದ ನಿವಾರಣೆ ಬಗ್ಗೆ ಸರ್ಕಾರದ ಕಡೆಯಿಂದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಮಲೇರಿಯಾ ಬದಲು ಏಡ್ಸ್ ಬಗ್ಗೆ ಹೇಳಿರುವುದಕ್ಕೆ ಕ್ಷಮಿಸಬೇಕು. ಮಲೇರಿಯಾ ರೋಗವನ್ನು ಕಂಡುಹಿಡಿಯತಕ್ಕಂಥ ಕೆಲಸದಲ್ಲೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಕಾರ್ಯಕ್ರಮ ನಡೆಯುತ್ತಾ ಇದೆ. ಅನೇಕ ರೀತಿಯಿಂದ ಕಾರ್ಯಕಾರಿಗಳನ್ನು ಮಾಡಿ ಸಂಬಂಧಪಟ್ಟ ಕಿರಿಯ ಆರೋಗ್ಯ ಇಲಾಖೆಯ ನೌಕರರಿಗೂ ಮಾಹಿತಿಯನ್ನು ಒದಗಿಸಿಕೊಡಲಾಗಿದೆ. ಅದ್ದರಿಂದ ಇದರಲ್ಲಿ ಎಲ್ಲಿಯೂ ತೊಂದರೆ ಕಾಣಿಸಲಿಲ್ಲ. ಇನ್ನೂ ಏನಾದೂ ಅವಶ್ಯಕವಾದಂಥ ಕೆಲಸ ಮಾಡಬೇಕೆಂದು ಇದ್ದರೆ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಬ್ಲಡ್ ಬ್ಯಾಂಕ್‌ಗೆ ಸಂಬಂಧಪಟ್ಟು ಹಾಗೆ ಶ್ರೀ ಯೋಗೀಶ್‌ಭಟ್ ಅವರು ಪ್ರಶ್ನೆಯನ್ನು ಕೇಳಿದ್ದಾರೆ. ಕರ್ನಾಟಕ ಹೆಲ್ತ್ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಈಗಾಗಲೇ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಿ ಆಸ್ಪತ್ರೆಗಳನ್ನು ಏನು ಸುಸಜ್ಜಿತವಾಗಿ ಮಾಡುತ್ತಿದ್ದಾರೆ ಅಲ್ಲಿಯಾದರೂ ಕೂಡ ಬ್ಲಡ್ ಬ್ಯಾಂಕ್‌ನ್ನು ತೆರೆಯಬೇಕಾಗುತ್ತದೆ. ಇಲ್ಲದಿದ್ದರೆ ಶಸ್ತ್ರಚಿಕಿತ್ಸೆಯನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಂದು ಶಸ್ತ್ರಚಿಕಿತ್ಸೆಗೂ ರಕ್ತ ಬೇಕಾಗುತ್ತದೆಂದು ಕೇಳುತ್ತಾರೆ. ರಕ್ತವನ್ನು ನಿಯಮ ಪ್ರಕಾರ ತಪಾಸಣೆ ಮಾಡದೆ, ಚಿಕಿತ್ಸೆಗೊಳಗಾದ ವ್ಯಕ್ತಿಗೆ ಹಾಕಿದರೆ ಡಾಕ್ಟರ್ ಮೇಲೆ ಕೇಸ್ ಆಗುತ್ತದೆ. ಆ ದೃಷ್ಟಿಯಿಂದ ಡಾಕ್ಟರ್‌ಗಳು ಹೆದರುತ್ತಿದ್ದಾರೆ. ಅದು ತುಂಬಾ ತೊಡಕಾಗಿದೆ. ಕೇಂದ್ರ ಸರ್ಕಾರದ ಜೊತೆಯಲ್ಲಿ ಆರೋಗ್ಯ ಇಲಾಖೆಯವರು ಮಾತನಾಡಿ, ನಿಯಮಾವಳಿಗಳನ್ನು ಸಡಲಿಸಿ ಅಥವಾ ನಿಯಮಗಳ ಚೌಕಟ್ಟಿನ ಇತಿಮಿತಿಯೊಳಗೆ ನಮ್ಮ ಆಸ್ಪತ್ರೆಗಳನ್ನು ಸುಸಜ್ಜಿತಗೊಳಿಸಿ, ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಬ್ಲಡ್ ಬ್ಯಾಂಕ್‌ಗಳನ್ನು ತೆರೆಯಲು ವಿಶೇಷವಾದ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಬ್ಲಡ್ ಬ್ಯಾಂಕಿನ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಕೂಡ ವಿಶೇಷ ಮಾರ್ಗದರ್ಶನ ಕೊಟ್ಟಿದ್ದು, ಪರತ್ತುಗಳನ್ನು ಸಡಿಲಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸುಪ್ರೀಂಕೋರ್ಟಿನ ತೀರ್ಪಿನಾಧಾರದ ಮೇಲೆ ಕೇಂದ್ರ ಸರ್ಕಾರದವರು ರೂಪಿಸುವ ನಿಯಮಾವಳಿಗಳೇನಿವೆ, ಆ ನಿಯಮಗಳ ವ್ಯಾಪ್ತಿಯಲ್ಲಿ ನಡೆಸಬೇಕಾಗಿದೆ. ನಮ್ಮ ಸಾಗರದಲ್ಲಿ ಅದನ್ನು ಮುಚ್ಚಿದ್ದೇವೆ. ತೀರ್ಥಹಳ್ಳಿ ಮತ್ತು ಬೇರೆ ಕಡೆ ಹೊಸದಾಗಿ ಆಸ್ಪತ್ರೆಗಳನ್ನು ಕಟ್ಟುತ್ತಿದ್ದೇವೆ. ಎಲ್ಲ ಕಡೆ ಸುಸಜ್ಜಿತವಾದ ಮತ್ತು ನಿಯಮಗಳಿಗನುಸಾರವಾಗಿ ಬ್ಲಡ್ ಬ್ಯಾಂಕ್ ಸ್ಥಾಪಿಸಲು ಅಗತ್ಯ ಕಟ್ಟಡವನ್ನು ಕಟ್ಟುತ್ತಿದ್ದೇವೆ.

ಶ್ರೀ ಪುಟ್ಟರಂಗಶಾಹ್:— ಮಲೇರಿಯಾ ರೋಗಕ್ಕೆ ಸಂಬಂಧಪಟ್ಟಂತೆ ಬೇಲೂರಿನಲ್ಲಿ ಎರಡು ಪ್ರಾಜೆಕ್ಟ್‌ಗಳು ನಡೆಯುತ್ತಿವೆ. ಕೂಲಿ ಕಾರ್ಮಿಕರು ಆಂಧ್ರಪ್ರದೇಶದಿಂದ ಬರುವುದರಿಂದ

ಈ ಕಾಯಿಲೆಯನ್ನು ತಡೆಯಲಾಗುವುದಿಲ್ಲ, ಹೀಗಾಗಿ ಅದು ಹರಡುತ್ತಿದೆ ಎಂಬ ವಿಚಾರ ತಮಗೆ ಗೊತ್ತಾಗಿದೆ. ಬೇಲೂರಿನಲ್ಲಿ ಈಗ ಮಲೇರಿಯಾ ರೋಗದ ಪ್ರಕರಣಗಳು ಜಾಸ್ತಿಯಾಗುತ್ತಿದ್ದು ಅದನ್ನು ತಡೆಯಲು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ :— ಅದರ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್ :— ಕೇಂದ್ರ ಸರ್ಕಾರದಿಂದ ಮಲೇರಿಯಾ ಏರಾಡಿಕೇಷನ್ ಪ್ರೋಗ್ರಾಂಗೆ ಬರುವ ಹಣವನ್ನು ಹತ್ತು ತಿಂಗಳ ಕಾಲ ಖರ್ಚು ಮಾಡದಿರುವ ವ್ಯವಸ್ಥೆಯನ್ನು ನಾವು ಕಳೆದ ಮೂರು ವರ್ಷಗಳಲ್ಲಿ ನೋಡಿದ್ದೇವೆ. ಕೊನೆಯ ಎರಡು ತಿಂಗಳಲ್ಲಿ ಆ ಹಣವನ್ನು ಖರ್ಚು ಮಾಡಬೇಕು, ಇಲ್ಲವೆ ಲ್ಯಾಪ್ಸ್ ಆಗುತ್ತದೆಂಬುದಕ್ಕೆ ಉದಾಹರಣೆ, ಎರಾಡಿಕೇಷನ್ ಪ್ರೋಗ್ರಾಂನಲ್ಲಿ ವೃಷಭಾವತಿ ನದಿ ಬೆಂಗಳೂರಿನಿಂದ ಮೈಸೂರಿಗೆ ಕೊಳೆ ನೀರು ಹರಿಯುವ ಜಾಗವಾಗಿದ್ದು, ಅದಕ್ಕೆ ಕೆಮಿಕಲ್ಸ್ ಸಿಂಪರಣೆ ಮಾಡಿದ್ದೇವೆಂದು 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಿಲ್ ಕೊಟ್ಟಿದ್ದಾರೆಂದರೆ, ಆ ಹಣವನ್ನು ಗ್ರಾಮೀಣ ಪ್ರದೇಶಕ್ಕೆ ಖರ್ಚು ಮಾಡದೆ, ಕೊನೆಯಲ್ಲಿ ಬಿಲ್ ತೋರಿಸಲು ಖರ್ಚುಮಾಡುತ್ತಿದ್ದಾರೆಂಬುದು ನೋವಿನ ವಿಚಾರವಾಗಿದೆ. ಈ ದೃಷ್ಟಿಯಲ್ಲಿ ಪ್ರತಿ ತಿಂಗಳು ಆ ಹಣವನ್ನು ಖರ್ಚು ಮಾಡಬೇಕು, ಸದುಪಯೋಗವಾಗುವ ರೀತಿಯಲ್ಲಿ ಕಾರ್ಯಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ. ವೃಷಭಾವತಿ ನದಿಗೆಂದು ಖರ್ಚು ಮಾಡಿರುವ 12 ಲಕ್ಷ ರೂಪಾಯಿಗಳ ವಿಚಾರವೇನು?

ಶ್ರೀ ಕಾಗೋಡು ತಿಮ್ಮಪ್ಪ :— ಅವರು ಅದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಉತ್ತರಿಸುತ್ತೇನೆ.

ಅಧ್ಯಕ್ಷರು :— ಪ್ರತ್ಯೇಕವಾದ ಪ್ರಶ್ನೆ ಕೇಳಿ ಅಂದುಮೇಲೆ ಮತ್ತೇನು?

ಶ್ರೀ ಎ. ರಾಮದಾಸ್ :— ನಗರ ಪ್ರದೇಶಗಳಲ್ಲಿ ಮಲೇರಿಯಾ ತಡೆಯಲು ನಾವು ಹಣವನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದ್ದಾರೆ. 10 ತಿಂಗಳ ಕಾಲದಲ್ಲಿ ಹಣವನ್ನು ಖರ್ಚು ಮಾಡುವುದಿಲ್ಲ; ಕೊನೆಯಲ್ಲಿ ಖರ್ಚು ಮಾಡುವ ವ್ಯವಸ್ಥೆ ನಮ್ಮಲ್ಲಿದೆ ಎಂದು ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ. ಈ ಯೋಜನೆಯಡಿಯಲ್ಲಿ ನಾನು ಪ್ರಶ್ನೆ ಕೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಆ ರೀತಿ ಕೇಂದ್ರದಿಂದ ಬಂದ ಹಣ ಬಳಸಿಕೊಳ್ಳುವ ಪ್ರಸಂಗವಿಲ್ಲ. ಏನಾದರೂ ಆ ರೀತಿ ಇದ್ದರೆ, ಆ ವರ್ಷದಲ್ಲೇ ಅದನ್ನು ಬಳಸಿಕೊಳ್ಳುವ ಪ್ರಯತ್ನ ಮಾಡುವುದಕ್ಕೆ ಇಲಾಖೆಯವರಿಗೆ ತಿಳಿಸುತ್ತೇನೆ.

ಶ್ರೀ ಸಿ. ಗುರುಸ್ವಾಮಿ :— ಚಾಮರಾಜನಗರ ಹೊಸ ಜಿಲ್ಲೆಯಾಗಿದ್ದು, ಜಿಲ್ಲಾ ಆಸ್ಪತ್ರೆ ಇದ್ದು, ಅಲ್ಲಿ ಬ್ಲಡ್ ಬ್ಯಾಂಕ್ ಇಲ್ಲವಾದ್ದರಿಂದ, ಅದನ್ನು ಮಂಜೂರು ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಪ್ರತಿ ಜಿಲ್ಲೆಯ ಹೆಡ್‌ಕ್ವಾರ್ಟರ್‌ನಲ್ಲಿ ಬ್ಲಡ್ ಬ್ಯಾಂಕ್ ಸ್ಥಾಪಿಸಬೇಕೆಂಬುದು ಸರ್ಕಾರದ ನೀತಿಯಾಗಿದ್ದು, ಎಲ್ಲೆಲ್ಲಿ ಇಲ್ಲ, ಅಂಥಕಡೆ ಸ್ಥಾಪಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ :— ಮಲೇರಿಯಾ ರೋಗ ನಿಯಂತ್ರಣ ನಗರ ಘಟಕಗಳ ಬಗ್ಗೆ ಮಾನು ವಿನಂತಿಸಿದ್ದೆ. ಹಣವನ್ನು ಬೇರೆ ಯಾವುದಕ್ಕೋ ಕೊಡುವುದಕ್ಕಿಂತ ಅಫೆಕ್ಟೆಡ್ ಏರಿಯಾಗೆ ಕೊಡುವ ರೀತಿಯಲ್ಲಿ ನಿಶ್ಚಿತ ಕಾರ್ಯಕ್ರಮ ಕೈಗೊಳ್ಳಬೇಕೆಂಬ ವಿನಂತಿ ಮಾಡುತ್ತೇನೆ. ಸುಮಾರು 20 ಮಕ್ಕಳು ಆಸ್ಪತ್ರೆ ಸೇರಿದ್ದು, ಮಂಗಳೂರಿನಲ್ಲಿ, ಗೊಬ್ಬರಕ್ಕೋಸ್ಕರ ಮೀನನ್ನು ಕೊಳೆಸುವುದರಿಂದ, ಅದರಿಂದ ಉತ್ಪನ್ನವಾಗುವ ನೊಣಗಳಿಂದ ಸಾವಿರಾರು ಕುಟುಂಬಗಳಿಗೆ ಆಹಾರಕ್ಕೆ ಕಷ್ಟವಾಗುವ ಸ್ಥಿತಿಯಿದೆ. ಪ್ರತಿ ವರ್ಷ ಅಕ್ಟೋಬರ್ ತಿಂಗಳ ನಂತರ, ಈ ಕಾಯಿಲೆ ಬರುತ್ತಿದೆ. ಇವತ್ತಿನವರೆಗೆ ಅದರ ಬಗ್ಗೆ ಕ್ರಮ ಕೈಗೊಳ್ಳಲು ಯಾರಿಗೂ ಸಾಧ್ಯವಾಗುತ್ತಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ. ಈ ಮೂಲಕ ಇನ್ನು ಮುಂದೆ ಸಾಂಕ್ರಾಮಿಕ ರೋಗ ಬಾರದ ರೀತಿಯಲ್ಲಿ ತಾವು ತಕ್ಷಣ ಕ್ರಮ ಕೈಗೊಳ್ಳಬೇಕು. ಅವಶ್ಯಕತೆ ಬಿದ್ದರೆ, ಅಂಥ ಕಡೆ ಬ್ಯಾನ್ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಸದಸ್ಯರು ಹೇಳಿರುವ ಸಲಹೆ ಉಪಯುಕ್ತವಾಗಿದ್ದು, ಅದನ್ನು ಅಗತ್ಯ ರೂಪದಲ್ಲಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ಎನ್. ಸಂಪಂಗಿ :— ಬಾಗೇಪಲ್ಲಿಯಲ್ಲಿ ಮಲೇರಿಯಾ ರೋಗ ಇದೆ. ಅದು ಗಡುನಾಡು, ಕೊಳಚೆ ಪ್ರದೇಶಗಳಲ್ಲಿ ಹೆಚ್ಚಿದೆ. ಆದರೆ, ಇದುವರೆಗೆ ಅಲ್ಲಿ ಯಾವುದೇ ಪ್ರಯೋಗಾಲಯವೂ ಇಲ್ಲ. ಆಸ್ಪತ್ರೆಯಲ್ಲಿ ಇವತ್ತು ಮಲೇರಿಯಾ ಬಂದಿದೆಯೇ ಎಂದು ತಿಳಿಸಲು ವೈದ್ಯರು ನೋಡದ ಪರಿಸ್ಥಿತಿ ಇದೆ. ತಾಲ್ಲೂಕು ಮಟ್ಟದಲ್ಲಿ ಆಸ್ಪತ್ರೆ, ಇದ್ದರೂ ಸಹ ಪ್ರಯೋಗಾಲಯವಿಲ್ಲ. ತಮ್ಮಲ್ಲಿ ನಾನಿ ಆಗಲೇ ಹೇಳಿದಂತೆ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದಂತೆ, ಹರಿಜನ ಹುಡುಗನೊಬ್ಬ ಸತ್ತುಹೋಗಿರುವ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದು, ಅದಕ್ಕೆ ಉತ್ತರ ಬಂದಿರುವುದಿಲ್ಲ. ಕಾಯಿಲೆ ಯಾವುದೆಂದು ಗುರ್ತಿಸುವುದಕ್ಕಾಗದೆ, ಅತನನ್ನು ಚಿಕ್ಕಬಳ್ಳಾಪುರದ ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ಹೇಳಿದಾಗ, ಆಂಬುಲೆನ್ಸ್, ಡ್ರೈವರ್ ಕೂಡ ಇರಲಿಲ್ಲ.

ಅಧ್ಯಕ್ಷರು :— ಅದನ್ನು ವೆರಿಫೈ ಮಾಡಿಸಿ.

ಶ್ರೀ ಎನ್. ಸಂಪಂಗಿ :— ಆರೋಗ್ಯ ಮಂತ್ರಿಗಳು ಅಂದು ಇರಲಿಲ್ಲವಾದ್ದರಿಂದ, ಅದರ ಬಗ್ಗೆ ಇವತ್ತು ತಮ್ಮ ಗಮನ ಸೆಳೆಯುತ್ತಿದ್ದೇನೆ. ಮಲೇರಿಯಾ ರೋಗ ಹೆಚ್ಚಿಗೆ ಬಾಗೇಪಲ್ಲಿಯಲ್ಲಿದೆ. ಅದಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಹಾಗೋಡು ತಿಮ್ಮಪ್ಪ :— ಮಲೇರಿಯಾ ರೋಗವನ್ನು ತಡೆಯಲು ರಾಜ್ಯವ್ಯಾಪಿ ಎಲ್ಲ ಆಗತ್ಯ ಕ್ರಮ ಕೈಗಳ್ಳಲಾಗಿದೆ. ಅದಕ್ಕೆ ಬೇಕಾದ ಔಷದಿ ಸಿಂಪಡಿಸುವುದಕ್ಕೆ, ಸೂಚಿಸಲಾಗಿದೆ. ಆದರೂ ಏನಾದರೂ ಪ್ರಕರಣಗಳು ಮತ್ತೆ ಎದ್ದು ಕಾಣುವಂಥ ಪ್ರಮಾಣದಲ್ಲಿದ್ದರೆ, ನಿಯಂತ್ರಿಸಲು ಆರೋಗ್ಯ ಇಲಾಖೆ ಖಂಡಿತ ಕ್ರಮ ಕೈಗೊಳ್ಳುತ್ತದೆ.

ತಡೆಹಿಡಿಯಲಾದ ಪ್ರಶ್ನೆ ಸಂ. 597(5572)

(ಉತ್ತರ ಬಂದಿರುವುದಿಲ್ಲ)

ಅಧ್ಯಕ್ಷರು :— ಮಂತ್ರಿಗಳು ಸಮಯ ಕೇಳಿರುತ್ತಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ತಿರುಪತಿಯಲ್ಲಿ ನಮ್ಮ ಲ್ಯಾಂಡ್‌ಅನ್ನು ಅಕ್ವಾಯರ್ ಮಾಡಿಕೊಂಡು ಅಲ್ಲಿ ಲೀಸ್ ಕೊಟ್ಟಿದ್ದನ್ನು ಇವರು ಕ್ಯಾನ್ಸಲ್ ಮಾಡಿದರು, ಟಿಟಿಡಿಯವರೆ ಬಾತ್‌ರೂಂಗಳನ್ನು ಕಟ್ಟುತ್ತಿದ್ದಾರೆ. ಅಲ್ಲಿ ಬಹಳ ತೊಂದರೆಯಿದ್ದು, ಅದರ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ.

ಅಧ್ಯಕ್ಷರು :— ನೀವು ಆದಷ್ಟು ಬೇಗ ಅದನ್ನು ಸರಿಪಡಿಸಿ.

ಶ್ರೀ ಬಾಬುರಾವ್ ಬಿ. ಚಿಂಚನೂರ್ :— ಇನಾಂ ಆಕ್ಟ್ ರದ್ದತಿ ಅಡಿಯಲ್ಲಿ ಸರ್ಕಾರ ಅರ್ಜಿ ಹಾಕಬೇಕಾಗಿತ್ತು, ಹಾಕಲಿಲ್ಲ. ಆಂಧ್ರಪ್ರದೇಶದವರು ರೀಗ್ರಾಂಟ್ ಮಾಡಿಕೊಂಡು ಇದು ನಮ್ಮದೇ ಲ್ಯಾಂಡ್ ಎಂದು ಹೇಳಿದ್ದರಿಂದ ಯಾವುದೇ ಕೆಲಸ ಮಾಡಿಸಲಾಗುತ್ತಿಲ್ಲ. ಹಿಂದಿನ ಮುಜರಾಯಿ ಸಚಿವರಾದ ಮುನಿಯಪ್ಪ ಮುದ್ದಪ್ಪನವರು ಅವರಿಂದ ಲೀಸ್ ಕೊಡಿ ಎಂದು ಲೀಸ್ ಅಗ್ರಿಮೆಂಟ್ ಮಾಡಿದ್ದರು. ಅದು ನಮ್ಮ ಲ್ಯಾಂಡ್ ಲೀಸ್ ಅಗ್ರಿಮೆಂಟ್ ಮಾಡಿರುವುದು ತಪ್ಪು. ನಾನು ಅಗ್ರಿಮೆಂಟ್ ಕ್ಯಾನ್ಸಲ್ ಮಾಡಿದ್ದೇನೆ. ಮೊನ್ನೆ ಮುಖ್ಯಮಂತ್ರಿಗಳಿಗೆ ತಿಳಿಸಿ, 50 ಲಕ್ಷ ರೂಪಾಯಿಗಳನ್ನು ರಿಪೇರಿ ಸಲುವಾಗಿ ಬಿಡುಗಡೆ ಮಾಡಿದ್ದೇನೆ. ಅವರೇನು ಮಾಡುತ್ತಿದ್ದಾರೆಂದರೆ, ನಮ್ಮ ಲ್ಯಾಂಡ್ ಎಂದು ತಿಳಿದು ಬೋರ್‌ವೆಲ್ ಹಾಕಿಸಿಕೊಡುತ್ತಿಲ್ಲ, ಸಿಮೆಂಟ್ ಕೊಡುತ್ತಿಲ್ಲ. ಈಗಾಗಲೇ ನಾನು ಎರಡು ಸಲ ಆಂಧ್ರದಲ್ಲಿ ಅಧಿಕಾರಿಗಳ ಜೊತೆ ಸಭೆ ಮಾಡಿದ್ದೇನೆ. ನಮ್ಮ ಮುಖ್ಯಮಂತ್ರಿಗಳಿಂದ ಆ ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರ ಬರೆಸಿದ್ದೇನೆ. ಅದು ನಮ್ಮ ಕರ್ನಾಟಕದ ಸ್ವತ್ತು ಇದ್ದು, ಅದನ್ನು ನಾನು ಕಾಪಾಡುತ್ತೇನೆ ಮತ್ತು ಸರಿ ಮಾಡುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಅದರ ಬಗ್ಗೆ ನಮಗೆ ಯಾವಾಗ ದಾಖಲೆಗಳನ್ನು ಒದಗಿಸುತ್ತಾರೆ?

ಶ್ರೀ ಬಾಬುರಾವ್ ಬಿ. ಚಿಂಚನಸೂರ್ :— ಆದಷ್ಟು ಜಾಗ್ರತೆ ಒದಗಿಸುತ್ತೇನೆ.